**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 7168/2022**

ಚಾಸಾ :-5 ಪ್ರಾಸಾ :-6

| | |
|---|---|
| ಹೆಸರು | **ಗುರುಪ್ರಸಾದ್** |
| ತಂದೆ ಹೆಸರು | **ಪುಟ್ಟರಂಗಯ್ಯ** |
| ವಯಸ್ಸು | **46** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಜುಟ್ಟನಹಳ್ಳಿ** |

**ದಿನಾಂಕಃ 07-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಚಾಸಾ-1 ರಿಂದ 4 ಮತ್ತು ಚಾಸಾ-6 ರವರು ಪರಿಚಯವಿರುತ್ತಾರೆ. ಆರೋಪಿಗಳು ಪರಿಚಯವಿರುತ್ತಾರೆ. ಈಗ ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿಃ 29-08-2022 ರಂದು ಪೋಲಿಸರು ಮಹಜರಿಗಾಗಿ ಜುಟ್ಟನಹಳ್ಳಿ ಗ್ರಾಮದ ಸರ್ವೆ ನಂಬರ್-92/2 ರ ಜಮೀನಿನ ಬಳಿ ಚಾಸಾ-1 ಮತ್ತು ಆರೋಪಿಗಳು ಗಲಾಟೆ ಮಾಡಿಕೊಂಡಿದ್ದ ಸಂಬಂಧ ಮಹಜರಿಗಾಗಿ ಬಂದಿದ್ದರು. ಆ ಸಮಯದಲ್ಲಿ ಹೆಬ್ಬಟಿನ ಗುರುತನ್ನು ಹಾಕಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-6 ರವರು ಇದ್ದರು. ಮಹಜರ್ ಸಮಯದಲ್ಲಿ ಪೋಲಿಸರು ಒಂದು ಕಲ್ಲು ಮತ್ತು ದೊಣ್ಣೆಯನ್ನು ತೆಗೆದುಕೊಂಡಿರುತ್ತಾರೆ. ಸದರಿ ಕಲ್ಲು ಮತ್ತು ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಮತ್ತು 2 ನ್ನು ತೋರಿಸಲಾಗಿ ಸದರಿ ಕಲ್ಲು ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ಪೋಟೋವನ್ನು ಹೊಲದಲ್ಲಿ ತೆಗೆದಿರುತ್ತಾರೆಂದು ನುಡಿಯುತ್ತಾರೆ.

**ಪಾಟೀ ಸವಾಲು** :- ಶ್ರೀ. **ಆರ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ಸರ್ವೆ ನಂಬರ್-92/2 ರಲ್ಲಿ ಎಷ್ಟು ಎಕರೆ ಜಮೀನು ಯಾರ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಚಾಸಾ-1 ರವರ ತಂದೆಯ ಹೆಸರಿಗೆ 2 ಎಕರೆ ಹಾಗೂ ಆರೋಪಿಗಳ ಹೆಸರಿಗೆ 2 ಗುಂಟೆ ಎಂದು ನುಡಿಯುತ್ತಾರೆ. ಆರೋಪಿಗಳ ಕುಟುಂಬಕ್ಕೂ ಹಾಗೂ ಚಾಸಾ-1 ರವರ ಕುಟುಂಬಕ್ಕೂ ಜಮೀನಿನ ವಿಚಾರದಲ್ಲಿ ಬಹಳ ವರ್ಷಗಳಿಂದ ಮನಸ್ಥಾಪವಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಂ.ಓ-2

ಯಾವ ಗಿಡದ ಬೇರು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಎಂ.ಓ-2 ರ ಗಿಡದ ಬೇರಿನ ಬಗ್ಗೆ ಬರೆದಿರುತ್ತಾರೋ ಅಥವಾ ಇಲ್ಲವೋ ಎಂದು ನಿಮಗೆ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಎಂ.ಓ-1 ರ ಕಲ್ಲಿನ ಬರೆದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ನಿಮಗೆ ಓದಿ ಹೇಳಿರುವುದಿಲ್ಲ ಹಾಗೂ ನೀವು ಓದಿ ನೋಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರಿಗೆ ಹಾಜರಾಗುವಂತೆ ಪೋಲಿಸರು ನಿಮಗೆ ಮತ್ತು ಚಾಸಾ-6 ರವರಿಗೆ ನೋಟಿಸ್ ಕೊಟ್ಟಿದ್ದರಾ ಎಂದರೆ ಸಾಕ್ಷಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಯಾವ ದಿನಾಂಕದಲ್ಲಿ ನೋೀಟಸನ್ನು ಕೊಟ್ಟಿರುತ್ತಾರೆಂದು ಸಾಕ್ಷಿಯು ಮರೆತಿರುತ್ತೇನಂದು ನುಡಿಯುತ್ತಾರೆ. ನೋಟಿಸಿನಲ್ಲಿ ಯಾವ ಪ್ರಕರಣದ ನಂಬರ್ ಎಂದು ನಮೂದು ಮಾಡಿದ ಬಗ್ಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಪೋಲಿಸ್ ಬರುವ ಮೊದಲು ನೀವು ಸ್ಥಳಕ್ಕೆ ಹೋಗಿರುತ್ತಿರೋ ಅಥವಾ ಪೋಲಿಸ್ ಬಂದ ನಂತರ ಸ್ಥಳಕ್ಕೆ ಹೋಗಿರುತ್ತಿರೋ ಎಂದರೆ ಸಾಕ್ಷಿ ಪೋಲಿಸ್ ಬಂದ ನಂತರ ಎಂದು ನುಡಿಯುತ್ತಾರೆ. ಎಷ್ಟು ನಿಮಿಷಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಪೋಲಿಸ್ ಬಂದ 10 ನಿಮಿಷ ನಂತರ ಹೋಗಿರುತ್ತೇವೆಂದು ನುಡಿಯುತ್ತಾರೆ. ಯಾರು ಯಾರು ಹೋಗಿರುತ್ತೀರಿ ಎಂದರೆ ಸಾಕ್ಷಿ ನಾನು ಮತ್ತು ಚಾಸಾ-6 ರವರು ಎಂದು ನುಡಿಯುತ್ತಾರೆ. ಚಾಸಾ-1 ರಿಂದ 4 ರವರಿಗೂ ಹಾಗೂ ನಿಮಗೂ ವಿಶ್ವಾಸದಿಂದ ಮಾತುಕತೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳದಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ನೀವು ಮತ್ತು ಚಾಸಾ-6 ರವರು ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರಿಂದ 4 ಹಾಗೂ ನೀವು ವಿಶ್ವಾಸದಿಂದ ಚೆನ್ನಾಗಿ ಇರುವುದರಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮಗಳ ಸಮಕ್ಷಮ ಎಂ.ಓ-1 ಮತ್ತು 2 ನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ದೊಣ್ಣೆ ಇರುವುದಿಲ್ಲ ಎಂದರೆ ಸಾಕ್ಷಿ ಇರುತ್ತದೆಂದು ನುಡಿಯುತ್ತಾರೆ. ನಿಮಗೆ ಎಷ್ಟು ವರ್ಷದಿಂದ ಕಣ್ಣಿನ ದೃಷ್ಟಿ ಇರುವುದಿಲ್ಲ ಎಂದರೆ ಸಾಕ್ಷಿ ಸುಮಾರು 8 ವರ್ಷಗಳಿಂದ ಶೇಖಡ-40 ರಷ್ಟು ಕಣ್ಣಿನ ದೃಷ್ಟಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ನುಡಿಯಲು ನಿಮ್ಮನ್ನು ಈ ದಿವಸ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆಂದರೆ ಸಾಕ್ಷಿ ಇಲ್ಲ ಪೋಲಿಸರು ಹೇಳಿದರು ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 7168/2022**

ಚಾಸಾ :-6 ಪ್ರಾಸಾ :-7

| | |
|---|---|
| ಹೆಸರು | **ಜಯಣ್ಣ** |
| ತಂದೆ ಹೆಸರು | **ಚನ್ನಪ್ಪ** |
| ವಯಸ್ಸು | **62** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಜುಟ್ಟನಹಳ್ಳಿ** |

**ದಿನಾಂಕಃ 07-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಚಾಸಾ-1 ರಿಂದ ಚಾಸಾ-5 ರವರು ಪರಿಚಯವಿರುತ್ತಾರೆ. ಆರೋಪಿಗಳು ಪರಿಚಯವಿರುತ್ತಾರೆ. ಈಗ ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯುನ್ನು ಪೋಲಿಸರು ಮಹಜರಿಗೆಂದು ಚಾಸಾ-1 ರವರ ಹೊಲದ ಹತ್ತಿರ ಬಂದಿದ್ದರು ಆಗ ಸಹಿ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಪೋಲಿಸರು ಒಂದು ಕಲ್ಲು ಮತ್ತು ಕಡ್ಡಿಯನ್ನು ತೆಗೆದುಕೊಂಡಿರುತ್ತಾರೆ. ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ಪೋಟೋವನ್ನು ಹೊಲದಲ್ಲಿ ತೆಗೆದಿರುತ್ತಾರೆಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಮತ್ತು 2 ನ್ನು ತೋರಿಸಲಾಗಿ ಸದರಿ ಕಲ್ಲು ಮತ್ತು ಕಡ್ಡಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-1 ಮತ್ತು 3, ಚಾಸಾ-5 ರವರು ಇದ್ದರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಭಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ದಿಃ 29-08-2022 ರಂದು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಚಾಸಾ-1 ಮತ್ತು ಆರೋಪಿಗಳ ನಡುವೆ ಗಲಾಟೆ ಆದ ಸಂಬಂಧ ಪೋಲಿಸರು ಮಹಜರಿಗಾಗಿ ಜುಟ್ಟನಹಳ್ಳಿ ಗ್ರಾಮದ ಸರ್ವೆ ನಂಬರ್-92/2 ರ ಜಮೀನಿನ ಬಳಿ ಬಂದಿದ್ದರು, ಆಗ ನೀವು ಸದರಿ ಮಹಜರಿಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** :- ಶ್ರೀ. **ಆರ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ಎಂ.ಓ-2 ಯಾವ ಗಿಡದ ಬೇರು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್-92/2 ರಲ್ಲಿ ಎಷ್ಟು ಎಕರೆ ಜಮೀನು ಯಾರ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳ ಕುಟುಂಬಕ್ಕೂ ಹಾಗೂ ಚಾಸಾ-1 ರವರ ಕುಟುಂಬಕ್ಕೂ ಜಮೀನಿನ ವಿಚಾರದಲ್ಲಿ ಬಹಳ ವರ್ಷಗಳಿಂದ ಮನಸ್ಥಾಪವಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಎಂ.ಓ-2 ರ ಗಿಡದ ಬೇರಿನ ಬಗ್ಗೆ ಬರೆದಿರುತ್ತಾರೋ ಅಥವಾ ಇಲ್ಲವೋ ಎಂದು ನಿಮಗೆ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಎಂ.ಓ-1 ರ ಕಲ್ಲಿನ ಬರೆದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ನಿಮಗೆ ಓದಿ ಹೇಳಿರುವುದಿಲ್ಲ ಹಾಗೂ ನೀವು ಓದಿ ನೋಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರಿಗೆ ಹಾಜರಾಗುವಂತೆ ಪೋಲಿಸರು ನಿಮಗೆ ಮತ್ತು ಚಾಸಾ-5 ರವರಿಗೆ ನೋಟಿಸ್ ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಪೋಲಿಸ್ ಬರುವ ಮೊದಲು ನೀವು ಸ್ಥಳಕ್ಕೆ ಹೋಗಿರುತ್ತಿರೋ ಅಥವಾ ಪೋಲಿಸ್ ಬಂದ ನಂತರ ಸ್ಥಳಕ್ಕೆ ಹೋಗಿರುತ್ತಿರೋ ಎಂದರೆ ಸಾಕ್ಷಿ ಪೋಲಿಸ್ ಬರುವ ಮೊದಲು ಎಂದು ನುಡಿಯುತ್ತಾರೆ. ಎಷ್ಟು ನಿಮಿಷಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಪೋಲಿಸ್ ಬಂದ 10 ನಿಮಿಷಕ್ಕೆ ಹೋಗಿರುತ್ತೇವೆಂದು ನುಡಿಯುತ್ತಾರೆ. ಸಹಿ ಮಾಡುಲು ಹೇಳಿದ್ದು ಸಹಿ ಮಾಡಿರುತ್ತೀರಿ ಅದು ಬಿಟ್ಟು ಬೇರೆ ಏನು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರಿಂದ 4 ರವರಿಗೂ ಹಾಗೂ ನಿಮಗೂ ವಿಶ್ವಾಸದಿಂದ ಮಾತುಕತೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳದಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ನೀವು ಮತ್ತು ಚಾಸಾ-5 ರವರು ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರಿಂದ 4 ಹಾಗೂ ನೀವು ವಿಶ್ವಾಸದಿಂದ ಚೆನ್ನಾಗಿ ಇರುವುದರಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮಗಳ ಸಮಕ್ಷಮ ಎಂ.ಓ-1 ಮತ್ತು 2 ನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ ನುಡಿಯಲು ನಿಮ್ಮನ್ನು ಈ ದಿವಸ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.